ಶ್ರೀ ಬಸವಂತಪ್ಪ ರೆಡ್ಡಿ ಮೋತಕಪಲ್ಲಿ: ಇದುವರೆಗೂ ನನ್ನ ಒಂದೇ ಒಂದು ಪ್ರಶ್ನೆಗೆ ಕೂಡ ಉತ್ತರ ಬಂದಿಲ್ಲ.

ಶ್ರೀ ಬೈರೇಗೌಡ: ಮಾನ್ಯ ಅಧ್ಯಕ್ಷರೆ ನಾನು ಮೊನ್ನೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೆ. ಕಳೆದ ಅಧಿವೇಶನದಲ್ಲಿ ನನ್ನ ಹೆಸರಿನಲ್ಲಿದ್ದಂಥ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಬಂದಿಲ್ಲ ಎಂದು ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗಳಿಗೆ ಇದುವರೆಗೂ ಉತ್ತರವೇ ಬಂದಿಲ್ಲ. ಅಂದಮೇಲೆ ನಾವು ಪ್ರಶ್ನೆಗಳನ್ನು ಕೇಳುವುದಾದರೂ ಏತಕ್ಕೆ? ಅವತ್ತಿನ ಸಂದರ್ಭಕ್ಕೆತಕ್ಕಂತೆ ಆ ಅಧಿವೇಶನದಲ್ಲಿ ಪ್ರಶ್ನೆಯನ್ನು ಕೇಳಿರುತ್ತೇವೆ. ಈಗ ಅದಕ್ಕೆ ಉತ್ತರ ಬಂದರೆ ಅದು ಇರ್ರಿಲೆವೆಂಟ್ ಆಗುತ್ತದೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ತಾವು ಸರ್ಕಾರಕ್ಕೆ ತೀವ್ರ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು: ನೀವು ಬಂದು ನನ್ನನ್ನು ಭೇಟಿ ಮಾಡಿ.

ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಕೆ.ಹೆಚ್. ಪಾಟೀಲ್ (ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ 1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 181ನೇ ಕಲಮಿನ ಮೇರೆಗೆ "1959ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ 2ನೇ ಮಾರ್ಚ್ 1991ರಂದು ಹೊರಡಿಸಲಾದ ಸಂಖ್ಯೆ ಸಿ.ಎಂ.ಡಬ್ಲ್ಯು. 88ಸಿ.ಎಲ್.ಎಂ. 91ರ ಆದೇಶವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

(ಶ್ರೀಮತಿ ಮೋಟಮ್ಮನವರು ಹಾಜರಿಲ್ಲ)

ವರದಿಗಳನ್ನೊಪ್ಪಿಸುವುದು

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ (ಉಪಾಧ್ಯಕ್ಷಿಣಿಯವರು): ಮಾನ್ಯ ಅಧ್ಯಕ್ಷರೆ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 7ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಬಾಬಾಗೌಡ ಆರ್ ಪಾಟೀಲ: ನಾನು ಇದನ್ನು ಅನುಮೋಡಿಸುತ್ತೇನೆ.

ಶ್ರೀ ಚೌಡರೆಡ್ಡಿ (ಅಧ್ಯಕ್ಷರು ಸಾರ್ವಜನಿಕ ಉದ್ಯಮಗಳ ಸಮಿತಿ): ಮಾನ್ಯ ಅಧ್ಯಕ್ಷರೇ ಸಾರ್ವಜನಿಕ ಉದ್ಯಮಗಳ ಸಮಿತಿಯ 45ನೇ ಹಾಗೂ 46ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಸಭೆಗೆ ವರದಿಗಳನ್ನೊಪ್ಪಿಸಲಾಯಿತು.

ಚಾಮರಾಜನಗರ ಗಲಭೆ ಉಂಟಾಗಿರುವ ಬಗ್ಗೆ ಪ್ರಸ್ತಾಪ

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ನಾನು ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ಚಾಮರಾಜನಗರದಲ್ಲಿ ನಿನ್ನೆ ದುರಾದೃಷ್ಟವಶಾತ್ ಆಗಬಾರದಂಥ ಒಂದು ಪ್ರಸಂಗ ಆಗಿ ಈಗ ಅಲ್ಲಿ ಅಶಾಂತ ವಾತಾವರಣ ಪ್ರಾರಂಭವಾಗುತ್ತಿದೆ. ಅದು ಯಾರಿಂದಲೇ ಆಗಿರಲಿ ಆ ಸ್ಥಳಕ್ಕೆ ಎಲ್ಲರೂ ಹೋಗಿ ಕೂತು ಶಾಂತ ವಾತಾವರಣ ಮೂಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ ಮತ್ತು ಈ ಸಭೆಯ ಮುಖಾಂತರ ಕೂಡ ಅಲ್ಲಿಯ ಜನರಲ್ಲಿ ಶಾಂತಿ ವಾತಾವರಣ ಬೆಳೆಯಲಿ ಎಂದು